

ಎಸ್ ಪಿ ವಿ ಜಿ ಎಂ ಸಿ ಟ್ರಸ್ಟ್ (ರಿ)

# 61ನೇ ಪಾರಂಪರಿಕ ಸಂಗೀತೋತ್ಸವ

# Heritage Music Festival

**SPVGMC TRUST**

**8th cross**
**V. V. Mohalla**
**Mysuru**

website: www.8thcross ganesha.org,
email: spvgmctrust@gmail.com,
call : 8845691178, 89022 81008

SPVGMC
TRUST

**Patron :**
Sri Vasu, Ex MLA
**President :**
M Jagannath Shenoy
**Vice President :**
M Laxminarayan
**Secretary :**
C R Himamshu
**Treasurer**
R Gururaj
**Trustees :**
Venugopal T S
Shylaja
Amaresh Das
Sridhar M K
Vasanth
Cheluvaraju C

# An Appeal

Mysuru, the cultural capital of Karnataka is resonant with the music of great maestros. SPVGMC Trust has been playing a crucial role in preserving the continuity of this resonance. It is shouldering the responsibility of keeping classical music alive with all its grandeur. It has been organizing music concerts during the Ganesha festival since 61 years.

All the maestros of Carnatic music, right from Chembai, T.N Krishnan, K.V. Narayanaswamy, S. Ramanathan, S.Rajam, T R Mahalingam, Lalgudi Jayaraman, Paroor Gopalakrishnan, D.K. Jayaraman, T.N.Sheshagopalan, Madhurai Mani Iyer, R.K. Srikanthan, Umayalapuram Sivaraman, Vellore Ramabhadran, Palghat Raghu to youngsters like T.M Krishna, Chitraveena N Ravikiran have performed here umpteen number of times. Even the maestros of Hindustani Music like N.Rajam, Hariprasad Chourasia, Gangubai Hangal, Rajeev Taranath have also performed here. All of them without an exception have recognized the significance of this trust. They consider it a privilege to perform here.

SPVGMC believes in training and educating the listeners. It has also organized 'Learning sessions' tutored by great maestros like S.Rajam, P.S. Narayanaswamy, Chitraveena N Ravikiran, T.N.Sheshagopalan and such others. Highly enlightening and educative 'Lecture Demonstrations' of stalwarts like Umayalapuram Sivaraman, T.N.Krishnan, T.N. Sheshagopalan, Mannargudi Eswaran, have also been organized for the benefit of listeners.

SPVGMC trust has been playing the vital role of a cultural ambassador in carrying Carnatic music to the masses. This is a very special year for us. We are celebrating 61st anniversary of our organisation. We thank all our supporters, who have helped us. At this juncture, support of people like you is very crucial to take the trust forward and embark on activities of cultural significance. You are well aware that our organization runs purely on the goodwill of the public and the munificence of the patrons. We are really confident that kalarasikas like you can help us to sustain.

ಆಗಸ್ಟ್
ಬುಧವಾರ
# 31
August
Wednesday

**ಸೆಪ್ಟೆಂಬರ್ 02ರಿಂದ ಸೆಪ್ಟೆಂಬರ್ 11ರ ತನಕ ಪ್ರತಿದಿನ ಸಂಜೆ 5:30ರಿಂದ 6:45ರ ವರೆಗೆ ಗಮಕ ಕಾರ್ಯಕ್ರಮವಿರುತ್ತದೆ.**

**ಸಂಜೆ 6.45ಕ್ಕೆ ನಾಗಸ್ವರ/ 6:45 P.M.Nagaswara**

ವಿದ್ವಾನ್ ರಂಗಸ್ವಾಮಿ – ನಾಗಸ್ವರ
ವಿದ್ವಾನ್ ಕೇಶವ ಮೋಹನ್ – ವಯೋಲಿನ್
ವಿದ್ವಾನ್ ಆರ್ ನಾಗೇಶ್ – ತವಿಲ್
ವಿದ್ವಾನ್ ಸಾಯಿ ಶಿವು – ಮೃದಂಗ

Vidwan Rangaswamy – Nagaswara
Vidwan Keshava Mohan – Violin
Vidwan R Nagesh – Tavil
Vidwan Sayi Shivu - Mridanga



## ವಿದ್ವಾನ್ ರಂಗಸ್ವಾಮಿ

**ವಿದ್ವಾನ್ ರಂಗಸ್ವಾಮಿಯವರು** ಕರ್ನಾಟಕದ ಮುಂಚೂಣಿಯ ನಾಗಸ್ವರವಾದಕರಲ್ಲಿ ಒಬ್ಬರು. ಸಂಗೀತ ಕುಟುಂಬಕ್ಕೆ ಸೇರಿದವರು. ಅವರ ತಂದೆ ಕ್ಲಾರಿನೆಟ್ ವಾದಕರು. ತಂದೆಯಿಂದಲೇ ಕಲಿಕೆ ಆರಂಭಿಸಿದ ಶ್ರೀಯುತರು ನಂತರ ತಮಿಳುನಾಡಿನ ಕುಂಜಪ್ಪ ಅವರಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿ, ಮೈಸೂರು ಅರಮನೆಯ ಆಸ್ಥಾನ ವಿದ್ವಾಂಸರಾದ ನಾಗರಾಜು ಅವರಲ್ಲಿ ಅಭ್ಯಾಸ ಮಾಡಿ ತಮ್ಮ ಕಲೆಯಲ್ಲಿ ಹೆಚ್ಚಿನ ಪರಿಣತಿ ಸಾಧಿಸಿದರು. ಇವರದು ಸಂಗೀತಮಯ ಕುಟುಂಬ – ಇವರ ಅಣ್ಣ ಮತ್ತು ಮಗ ನಾಗಸ್ವರವಾದಕರು, ಇವರ ತಮ್ಮ ಡೋಲು ವಾದಕರು. ಸಂಗೀತದ ಪ್ರತಿಷ್ಠಿತ ವೇದಿಕೆಗಳಲ್ಲಿ ನುಡಿಸಿರುವ ಶ್ರೀಯುತರು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪುರಸ್ಕೃತರು.

ಸೆಪ್ಟೆಂಬರ್ 02ರಿಂದ ಸೆಪ್ಟೆಂಬರ್ 11ರ ತನಕ ಪ್ರತಿದಿನ ಸಂಜೆ 5:30ರಿಂದ 6:45ರ ವರೆಗೆ ಗಮಕ ಕಾರ್ಯಕ್ರಮವಿರುತ್ತದೆ.

ಸೆಪ್ಟೆಂಬರ್
ಗುರುವಾರ

# 1

September
Thursday

## 61ನೇ ವರ್ಷದ ಪಾರಂಪರಿಕ ಸಂಗೀತೋತ್ಸವದ 'ಉದ್ಘಾಟನಾ ಸಮಾರಂಭ' ಸಂಜೆ 6ಗಂಟೆಗೆ



**ಉದ್ಘಾಟನೆ : ಶ್ರೀ ಶಾಂತಕುಮಾರ್,**
ನಿರ್ದೇಶಕರು, ದಿ ಪ್ರಿಂಟರ್ಸ್ (ಮೈಸೂರು) ಲಿ.,
ಪ್ರಕಾಶಕರು ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

**ಅಧ್ಯಕ್ಷತೆ : ಶ್ರೀ ಜಗನ್ನಾಥ ಶೆಣೈ, ಅಧ್ಯಕ್ಷರು,**
ಎಸ್.ಪಿ.ವಿ.ಜಿ.ಎಂ.ಸಿ ಟ್ರಸ್ಟ್ (ರಿ).

**ಉಪಸ್ಥಿತಿ : ಶ್ರೀ ವಾಸು**
ಮಾಜಿ ಶಾಸಕರು – ಪೋಷಕರು ಎಸ್.ಪಿ.ವಿ.ಜಿ.ಎಂ.ಸಿ ಟ್ರಸ್ಟ್ (ರಿ).

**ಸನ್ಮಾನ ಸಮಾರಂಭ : ಶ್ರೀ ರಮೇಶ್ ನರಸಯ್ಯ ರವರಿಗೆ,**
ಉಪ ಆಯುಕ್ತರು, ವಾಣಿಜ್ಯ ತೆರಿಗೆ ಮೈಸೂರು.
'ಪ್ರಥಮ ಬಾರಿಯ ಮುಖ್ಯಮಂತ್ರಿ ತೆರಿಗೆ ಸೇವಾ
2021–22 ಪ್ರಶಸ್ತಿ ಪುರಸ್ಕೃತರು.'

ಸೆಪ್ಟೆಂಬರ್
ಗುರುವಾರ
# 1
September
Thursday

**ಸೆಪ್ಟೆಂಬರ್ 02ರಿಂದ ಸೆಪ್ಟೆಂಬರ್ 11ರ ತನಕ ಪ್ರತಿದಿನ ಸಂಜೆ 5:30ರಿಂದ 6:45ರ ವರೆಗೆ ಗಮಕ ಕಾರ್ಯಕ್ರಮವಿರುತ್ತದೆ.**

ಸಂಜೆ 6:45ಕ್ಕೆ: ಗಾಯನ/ **6:45 P.M. Vocal**

ವಿದ್ವಾನ್ ಟಿ ಎಂ ಕೃಷ್ಣ – ಗಾಯನ
ವಿದುಷಿ ಅಕ್ಕರೈ ಶುಭಲಕ್ಷ್ಮಿ – ವಯೋಲಿನ್
ವಿದ್ವಾನ್ ಕೆ ಯು ಜಯಚಂದ್ರ ರಾವ್ – ಮೃದಂಗ
ವಿದ್ವಾನ್ ವಾಳಪಲ್ಲಿ ಕೃಷ್ಣಕುಮಾರ್ – ಘಟ

Vidwan T M Krishna – Vocal
Vidushi Akkarai Shubhalakshmi – Violin
Vidwan K U Jayachandra Rao – Mridanga
Vidwan Vazhapalli Krisha Kumar - Ghata



## ಟಿ ಎಂ ಕೃಷ್ಣ

ವಿದ್ವಾನ್ ಶ್ರೀ ಟಿ ಎಂ ಕೃಷ್ಣ ಕೇವಲ ಶ್ರೇಷ್ಠಮಟ್ಟದ ಸಂಗೀತಗಾರರಷ್ಟೇ ಅಲ್ಲ, ಸಂಗೀತವನ್ನು ಕುರಿತು ಆಳವಾಗಿ ಅಭ್ಯಾಸ ಮಾಡಿ ಅತ್ಯಂತ ಮೌಲಿಕವಾದ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಕೃಷ್ಣ ಅವರು ವಿದ್ವಾನ್ ಶ್ರೀ ಬಿ ಸೀತಾರಾಮ ಶರ್ಮ ಅವರಲ್ಲಿ ಸಂಗೀತ ಶಿಕ್ಷಣ ಪ್ರಾರಂಭಿಸಿ, ನಂತರ ರಾಗ–ತಾನ–ಪಲ್ಲವಿ ಕುರಿತಂತೆ ಶ್ರೀ ಚೆಂಗಲ್‌ಪೇಟ್ ರಂಗನಾಥನ್ ಅವರಲ್ಲಿ ತರಬೇತಿ ಪಡೆದರು. ಸೆಮ್ಮಂಗುಡಿ ಶ್ರೀ ಶ್ರೀನಿವಾಸ ಅಯ್ಯರ್ ಅವರಲ್ಲಿ ಉನ್ನತ ಶಿಕ್ಷಣ ಪಡೆದರು. ಸಂಗೀತದಲ್ಲಿ ನಿರಂತರವಾದ ಹುಡುಕಾಟದಲ್ಲಿ ತೊಡಗಿರುವ ಕೃಷ್ಣ, ಸಂಗೀತ ಪ್ರಸ್ತುತಿಯಲ್ಲಿ ತಮ್ಮದೇ ಆದ ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಅವರ ಸದರನ್ ಮ್ಯೂಸಿಕ್, ಸೆಬಾಸ್ಟಿಯನ್ ಅಂಡ್ ಸನ್ಸ್ ಇತ್ಯಾದಿ ಕೃತಿಗಳು ಸಂಗೀತ ಕ್ಷೇತ್ರದಲ್ಲಿ ಒಂದು ಅಲೆಯನ್ನೇ ಸೃಷ್ಟಿಸಿವೆ. ಅವರಿಗೆ ರಾಮೋನ್ ಮ್ಯಾಗ್ಸೆಸೇ ಸೇರಿದಂತೆ ಹಲವು ಪ್ರತಿಷ್ಠಿತ ಪ್ರಶಸ್ತಿಗಳು ಸಂದಿವೆ.

ಸೆಪ್ಟೆಂಬರ್
ಶುಕ್ರವಾರ

# 2

September
Friday

**ಸಂಜೆ 5.30 ರಿಂದ 6.30 ಕಾವ್ಯವಾಚನ**
**ಭೀಮಸೇನ ಪ್ರತಿಷ್ಠೆ/ವಿದ್ವಾನ್ ಗಣೇಶ ಉಡುಪ/ಶ್ರೀ ದಕ್ಷಿಣಾಮೂರ್ತಿ ಜಿ**

ವಿದುಷಿಯರಾದ ಅಕ್ಕರೈ ಸಹೋದರಿಯರು – ದ್ವಂದ್ವ ಗಾಯನ
ವಿದ್ವಾನ್ ವಿಠ್ಠಲ ರಂಗನ್ – ವಯೋಲಿನ್
ವಿದ್ವಾನ್ ಕೆ ಯು ಜಯಚಂದ್ರ ರಾವ್ – ಮೃದಂಗ
ವಿದ್ವಾನ್ ವಾಳ್ಳಪಳ್ಳಿ ಕೃಷ್ಣಕುಮಾರ್ – ಘಟ

Vidushi Akkarai Sisters – Vocal Duet
Vidwan Vittala Rangan - Violin
Vidwan K U Jayachandra Rao – Mridanga
Vidwan Vazhapalli Krisha Kumar – Ghata



## ವಿದುಷಿ ಅಕ್ಕರೈ ಶುಭಲಕ್ಷ್ಮಿ ಮತ್ತು ವಿದುಷಿ ಅಕ್ಕರೈ ಸ್ವರ್ಣಲತಾ

ಅಕ್ಕರೈ ಸೋದರಿಯರು ಸಂಗೀತ ಕುಟುಂಬಕ್ಕೆ ಸೇರಿದವರು. ತಾತ ಸುಚೀಂದ್ರಂ ಶಿವಸುಬ್ರಮಣಿಯನ್ ಬಹುಮುಖಿ ಪ್ರತಿಭೆಯ ಕಲಾವಿದರು. ಅಜ್ಜಿ ಆರ್ ಸ್ವರ್ಣಾಂಬಾಳ್ ಹರಿಕಥಾ ಕಲಾವಿದೆ. ತಂದೆ ಸ್ವಾಮಿನಾಥನ್ ಕೂಡ ನುರಿತ ವಯೋಲಿನ್‌ವಾದಕರು. ಹಾಗಾಗಿಯೇ ಸಹೋದರಿಯರಿಬ್ಬರೂ ವಯೋಲಿನ್‌ವಾದನ ಮತ್ತು ಹಾಡುಗಾರಿಕೆ ಎರಡರಲ್ಲೂ ಪರಿಣತರು. ತಂದೆಯವರಿಂದ ಕಲಿಕೆ ಪ್ರಾರಂಭಿಸಿ ನಂತರ ಶ್ರೀಯುತರಾದ ವಿ ಜಾನಕೀರಾಮನ್, ಓ ವಿ ಸುಬ್ರಮಣಿಯನ್, ಪಿ ಎಸ್ ನಾರಾಯಣಸ್ವಾಮಿ ಹಾಗೂ ಚಿತ್ರವೀಣಾ ರವಿಕಿರಣ್ ಅವರಲ್ಲಿ ಸಂಗೀತ ಅಭ್ಯಾಸ ಮುಂದುವರಿಸಿದರು. ಇಂದಿನ ವಯೋಲಿನ್ ವಾದಕರಲ್ಲಿ ತಮ್ಮ ವಿಶಿಷ್ಟ ನಾದಗುಣ ಹಾಗೂ ಪರಿಪೂರ್ಣ ಗಾಯನ ಶೈಲಿಯಿಂದಾಗಿ ತೀರಾ ಭಿನ್ನವಾಗಿ ಮತ್ತು ವಿಶೇಷವಾಗಿ ಎದ್ದು ಕಾಣುತ್ತಾರೆ. ಗಾಯನ ಹಾಗೂ ವಯೋಲಿನ್ ಎರಡರಲ್ಲೂ ಅವರು ನೀಡುತ್ತಾ ಬಂದಿರುವ ಕಾರ್ಯಕ್ರಮ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಇವರು ಪಕ್ಕವಾದ್ಯ ಕಲಾವಿದರಾಗಿಯೂ ಅತ್ಯಂತ ಶ್ರೇಷ್ಠ ಕಲಾವಿದರೊಡನೆ ನುಡಿಸಿ ಮೆಚ್ಚುಗೆ ಗಳಿಸಿದ್ದಾರೆ.

**ಸೆಪ್ಟೆಂಬರ್ ಶನಿವಾರ**

# 3

**September Saturday**

**ಸಂಜೆ 5.30 ರಿಂದ 6.30 ಕಾವ್ಯವಾಚನ**

**ದುರ್ಯೋಧನ ವಿಲಾಪ/ವಿದುಷಿ ಅನ್ನಪೂರ್ಣ ನಾಗೇಂದ್ರ/ಶ್ರೀ ದಕ್ಷಿಣಾಮೂರ್ತಿ ಬಿ**

**ಸಂಜೆ 6.45ಕ್ಕೆ ದ್ವಂದ್ವ ಗಾಯನ/6:45 P.M.Vocal Duet**

ಸಂಜೆ 6.45ಕ್ಕೆ
ವಿದ್ವಾನ್ ಮಲ್ಲಾಡಿ ಸಹೋದರರು – ದ್ವಂದ್ವ ಗಾಯನ
ವಿದ್ವಾನ್ ಎಂಬಾರ್ ಕಣ್ಣನ್ – ವಯೋಲಿನ್
ವಿದ್ವಾನ್ ಅರ್ಜುನ್ ಕುಮಾರ್ – ಮೃದಂಗ
ವಿದ್ವಾನ್ ಜಿ ಎಸ್ ರಾಮಾನುಜನ್– ಘಟ

Vidwan Malladi Brothers – Vocal Duet
Vidwan Embar Kannan – Violin
Vidwan Arjun Kumar – Mridanga
Vidwan G S Ramanujan – Ghata



## ವಿದ್ವಾನ್ ಮಲ್ಲಾಡಿ ಸಹೋದರರು

ಮಲ್ಲಾಡಿ ಸಹೋದರರೆಂದೇ ಪ್ರಸಿದ್ಧರಾಗಿರುವ ವಿದ್ವಾನ್ ಮಲ್ಲಾಡಿ ಶ್ರೀರಾಂಪ್ರಸಾದ್ ಮತ್ತು ವಿದ್ವಾನ್ ಮಲ್ಲಾಡಿ ರವಿಕುಮಾರ್ ಅವರು ಇಂದು ಕರ್ನಾಟಕ ಸಂಗೀತದ ವಿಶ್ವವಿಖ್ಯಾತ ಗಾಯಕರು. ತಂದೆ ಮಲ್ಲಾಡಿ ಸೂರಿ ಬಾಬು ಅವರಲ್ಲಿ ಕಲಿಕೆ ಪ್ರಾರಂಭಿಸಿ ಅನಂತರ ವಿದ್ವಾಂಸರಾದ ಶ್ರೀಪಾದ ಪಿನಾಕಪಾಣಿ, ನೇದನೂರಿ ಕೃಷ್ಣಮೂರ್ತಿ, ವೋಲಟ್ಟಿ ವೆಂಕಟೇಶ್ವರುಲು ಅವರಲ್ಲಿ ಕಲಿತರು. ಅಪರೂಪದ ರಾಗಗಳನ್ನು ಹಾಡಿ ಜನಪ್ರಿಯಗೊಳಿಸುವುದರಲ್ಲಿ ಅತ್ಯಂತ ಪರಿಣತರು. ಗೋಳದ ಉದ್ದಗಲಕ್ಕೂ ಸುತ್ತಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಚೆನ್ನೈ ಕೃಷ್ಣಗಾನ ಸಭೆಯ ಶ್ರೀ ವೋಲಟ್ಟಿ ವೆಂಕಟೇಶ್ವರುಲು ಮೆಮೋರಿಯಲ್ ಪ್ರಶಸ್ತಿ, ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಬೆಸ್ಟ್ ಕನ್ಸರ್ಟ್ ಅವಾರ್ಡ್, ಬೆಂಗಳೂರಿನ ಶ್ರೀರಾಮಸೇವಾ ಮಂಡಲಿಯ ರಾಮ ಗಾನ ಕಲಾಚಾರ್ಯ ಪ್ರಶಸ್ತಿ, ಶ್ರೀರಾಮ ಲಲಿತಕಲಾ ಮಂಡಲಿಯ ಸಂಗೀತ ವೇದಾಂತ ಧುರೀಣ ಮುಂತಾದ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಸೆಪ್ಟೆಂಬರ್
ಭಾನುವಾರ

# 4

**September**
**Sunday**

**ಸಂಜೆ 5.30 ರಿಂದ 6.30 ಕಾವ್ಯವಾಚನ**
**ಅರ್ಧನಾರೀಶ್ವರ ಲೀಲೆ/ವಿದ್ವಾನ್ ಹಾಸಿಂ ಮಲ್ಲಿಗೆಮಡುವು , ಶ್ರೀ ಮೋರಟಿದ ಮಲ್ಲಿಕಾರ್ಜುನ**
**ಸಂಜೆ 6.45ಕ್ಕೆ ಪಿಯಾನೋ–ಬಾನ್ಸುರಿ /6:45 P.M. Piano-Bansuri**

ವಿದ್ವಾನ್ ಅನಿಲ್ ಶ್ರೀನಿವಾಸನ್ – ಪಿಯಾನೊ
ಪಂಡಿತ್ ಪ್ರವೀಣ್ ಗೋಡ್ಖಿಂಡಿ – ಬಾನ್ಸುರಿ
ವಿದ್ವಾನ್ ಅನಂತ್ ಆರ್ ಕೃಷ್ಣನ್ – ಮೃದಂಗ

Vidwan Anil Srinivasan - Piano
Pandit Praveen Godkhindi – Bansuri
Vidwan Ananth R Krishnan – Mridanga



**ವಿದ್ವಾನ್ ಅನಿಲ್ ಶ್ರೀನಿವಾಸನ್**
ಕರ್ನಾಟಕ ಸಂಗೀತವನ್ನು ಪಿಯಾನೋದಲ್ಲಿ ನುಡಿಸುವ ಏಕೈಕ ಕಲಾವಿದರು ಅನಿಲ್ ಶ್ರೀನಿವಾಸನ್. ಕರ್ನಾಟಕ ಸಂಗೀತ ಮತ್ತು ಪಾಶ್ಚಾತ್ಯ ಅಭಿಜಾತ ಸಂಗೀತದಲ್ಲಿ ಸಮಾನ ಪರಿಣತಿ ಇರುವ ಕಲಾವಿದ. ಪಾಶ್ಚಾತ್ಯರ ಮುಂದೆ ಪಿಯಾನೋದಲ್ಲಿ ಪಾಶ್ಚಾತ್ಯ ಅಭಿಜಾತ ಸಂಗೀತವನ್ನು ನುಡಿಸಿ ಸೈ ಎನಿಸಿಕೊಂಡವರು. ಕರ್ನಾಟಕ ಸಂಗೀತದ ಮ್ಯಾಂಡೊಲಿನ್ ಶ್ರೀನಿವಾಸ್, ಉಮಯಾಳಪುರಂ ಶಿವರಾಮನ್, ಚಿತ್ರವೀಣಾ ರವಿಕಿರಣ್, ಜಯಂತಿ ಕುಮರೇಶ್, ಮೈಸೂರು ಎಂ ನಾಗರಾಜ್, ನಿಖಿಲ್ ಗುರುಚರಣ್; ಹಾಗೆಯೇ ಹಿಂದುಸ್ತಾನಿ ಕಲಾವಿದರಾದ ರಾಕೇಶ್ ಚೌರಾಸಿಯಾ, ಗೌರವ್ ಮುಜುಂದಾರ್ ಮುಂತಾದವರೊಡನೆ ಜುಗಲ್‌ಬಂದಿ ನುಡಿಸಿದ್ದಾರೆ. ಬೆಸ್ಟ್ ಪಿಯಾನಿಸ್ಟ್ ಇನ್ ದ ಕಾಮನ್‌ವೆಲ್ತ್, ಕಲೈಮಾಮಣಿ, ಸ್ವಾಮಿ ಹರಿದಾಸ ಪುರಸ್ಕಾರ ಮುಂತಾದ ಹಲವು ಪ್ರಶಸ್ತಿ ಪುರಸ್ಕಾರಗಳು ಇವರಿಗೆ ಸಂದಿವೆ.

**ಪಂಡಿತ್ ಪ್ರವೀಣ್ ಗೋಡ್ಖಿಂಡಿ**
ಹಿಂದುಸ್ತಾನಿ ಸಂಗೀತಕ್ಕೆ ಕರ್ನಾಟಕದ ಅಮೂಲ್ಯ ಕೊಡುಗೆ ಪ್ರವೀಣ್ ಗೋಡ್ಖಿಂಡಿ. ತಂದೆ ಪಂಡಿತ್ ವೆಂಕಟೇಶ್ ಗೋಡ್ಖಿಂಡಿ ಮತ್ತು ವಿದ್ವಾನ್ ಅನೂರು ಅನಂತಕೃಷ್ಣ ಶರ್ಮಾ ಅವರಲ್ಲಿ ಶಿಷ್ಯವೃತ್ತಿ, ವಿಶ್ವ ಕೊಳಲು ಹಬ್ಬದಲ್ಲಿ ಬಾನ್ಸುರಿ ನುಡಿಸಿದ ಹಾಗೂ 8 ಅಡಿ ಉದ್ದದ ಕಾಂಟ್ರಾಬಾಸ್ ಬಾನ್ಸುರಿ ನುಡಿಸಿದ ಮೊತ್ತ ಮೊದಲ ಭಾರತೀಯ. ಖ್ಯಾತ ಕಲಾವಿದರಾದ ಡಾ ಬಾಲಮುರಳಿಕೃಷ್ಣ, ಜಾಕಿರ್ ಹುಸೇನ್, ವಿಶ್ವಮೋಹನ್ ಭಟ್, ಶಿವಮಣಿ, ಮುಂತಾದವರೊಡನೆ ನುಡಿಸಿದ್ದಾರೆ. ಬೇರು ಮತ್ತು ವಿಮುಕ್ತಿ ಚಿತ್ರಗಳಿಗೆ ನೀಡಿದ ಸಂಗೀತಕ್ಕೆ ರಾಷ್ಟ್ರಪ್ರಶಸ್ತಿ ಪಡೆದಿದ್ದಾರೆ. ಸುರಮಣಿ, ನಾದನಿಧಿ, ಸುರ್ ಸಾಮ್ರಾಟ್ ಮುಂತಾದ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಸೆಪ್ಟೆಂಬರ್
ಸೋಮವಾರ

# 5

**September**
**Monday**

**ಸಂಜೆ 5.30 ರಿಂದ 6.30 ಕಾವ್ಯವಾಚನ**
**ಭಿಕ್ಷಾಟನ ಲೀಲೆ/ವಿದುಷಿ ಪದ್ಮಲತಾ ನಾಗೇಶ್/ಶ್ರೀ ಹೊರಬೈಲ ಮಲ್ಲಿಕಾರ್ಜುನ**
ಸಂಜೆ 6.45ಕ್ಕೆ ಗಾಯನ / 6:45 P.M. Vocal

ವಿದುಷಿ ಜಯಂತಿ ಕುಮರೇಶ್ – ವೀಣೆ
ವಿದ್ವಾನ್ ಕುಮರೇಶ್ – ವಯೋಲಿನ್
ವಿದ್ವಾನ್ ಅನಂತ ಆರ್ ಕೃಷ್ಣನ್ – ಮೃದಂಗ
ವಿದ್ವಾನ್ ಗಿರಿಧರ ಉಡುಪ – ಘಟ

Vidushi Jayanthi Kumaresh - Veena
Vidwan Kumaresh - Violin
Vidwan Ananth R Krishnan – Mridanga
Vidwan Giridhara Udupa – Ghata



**ವಿದ್ವಾನ್ ಕುಮರೇಶ್**
ಬಾಲಪ್ರತಿಭೆಯಾಗಿ ಸಂಗೀತ ಕ್ಷೇತ್ರಕ್ಕೆ ಕಾಲಿಟ್ಟ ಕುಮರೇಶ್ ಇಂದು ಈ ಕ್ಷೇತ್ರದಲ್ಲಿ ದೈತ್ಯರಾಗಿ ಬೆಳೆದಿದ್ದಾರೆ. ಸಂಗೀತ ಮತ್ತು ವಾದ್ಯದ ತಾಂತ್ರಿಕತೆ ಇವರಲ್ಲಿ ಸೊಗಸಾಗಿ ಮೇಳೈಸಿದೆ. 40 ವರ್ಷಗಳು ಈ ಕ್ಷೇತ್ರದಲ್ಲಿ ಕೃಷಿ ಮಾಡಿರುವ ಇವರು ಸದಾ ಹೊಸದನ್ನು ಹುಡುಕುತ್ತಾ ಹಾತೊರೆಯುವ ಪ್ರಯೋಗಶೀಲರು. ಹಲವು ಸಿನಿಮಾ ಮತ್ತು ನೃತ್ಯ ಕಾರ್ಯಕ್ರಮಗಳಿಗೆ ಸಂಗೀತ ನಿರ್ದೇಶಿಸಿದ್ದಾರೆ. ಕಲೈಮಾಮಣಿಯೂ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

**ವಿದುಷಿ ಜಯಂತಿ ಕುಮರೇಶ್**
ಇಂದು ಸರಸ್ವತಿ ವೀಣೆಯ ವಾದಕರಲ್ಲಿ ಜಯಂತಿ ಅಗ್ರಗಣ್ಯರು. ಪ್ರಖ್ಯಾತ ಲಾಲ್‌ಗುಡಿ ಕುಟುಂಬಕ್ಕೆ ಸೇರಿದ ಜಯಂತಿಯವರು ತಾಯಿ ವಿದುಷಿ ಲಾಲ್ಗುಡಿ ರಾಜಲಕ್ಷ್ಮಿಯವರಲ್ಲಿ ಕಲಿತು, ಅನಂತರ ವಿದುಷಿ ಪದ್ಮಾವತಿ ಅನಂತಗೋಪಾಲನ್ ಅವರಲ್ಲಿ ಕಲಿಕೆ ಮುಂದುವರಿಸಿ, ವೀಣಾ ಮಾಂತ್ರಿಕ ವಿದ್ವಾನ್ ಎಸ್ ಬಾಲಚಂದರ್ ಅವರಲ್ಲಿ ಮಾರ್ಗದರ್ಶನ ಪಡೆದರು. ದೇಶವಿದೇಶಗಳ ಪ್ರಸಿದ್ಧ ವೇದಿಕೆಗಳಲ್ಲಿ ನುಡಿಸಿದ್ದಾರೆ. ಎಲ್ಲಾ ಖ್ಯಾತ ಹಿಂದುಸ್ತಾನಿ ಕಲಾವಿದರೊಂದಿಗೆ ಜುಗಲ್‌ಬಂದಿ ನುಡಿಸಿದ್ದಾರೆ. ಸಂಗೀತ ಚೂಡಾಮಣಿ, ಕಲೈಮಾಮಣಿಯೂ ಸೇರಿದಂತೆ ಹಲವು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ. ಪತಿ ಶ್ರೀ ಕುಮರೇಶ್ ಅವರ ಜೊತೆ ಇವರ ವೀಣಾ-ವಯೋಲಿನ್ ಜುಗಲ್‌ಬಂದಿ ತುಂಬಾ ಹೆಸರುವಾಸಿ.

ಸೆಪ್ಟೆಂಬರ್
ಮಂಗಳವಾರ

# 6

**September**
**Tuesday**

**ಸಂಜೆ 5.30 ರಿಂದ 6.30 ಕಾವ್ಯವಾಚನ**
**ಕಂದರ್ಪ ಹರನಿಂದ ಬೆಂದುದು/ಕುಮಾರಿ ಧನ್ಯಾ /ಶ್ರೀ ಶ್ರೀನಿವಾಸ ಫಣಿ**
**ಸಂಜೆ 6.45ಕ್ಕೆ ಗಾಯನ/6:45 P.M. Vocal**

ವಿದ್ವಾನ್ ಅಭಿಷೇಕ್ ರಘುರಾಂ – ಗಾಯನ
ವಿದ್ವಾನ್ ಎಚ್ ಎನ್ ಭಾಸ್ಕರ್ – ವಯೋಲಿನ್
ವಿದ್ವಾನ್ ಮನ್ನಾರ್‌ಗುಡಿ ವಾಸುದೇವನ್ – ತವಿಲ್
ವಿದ್ವಾನ್ ಅನಂತ ಆರ್ ಕೃಷ್ಣನ್ – ಮೃದಂಗ

Vidwan Abhishek Raghuram - Vocal
Vidwan H N Bhaskar – Violin
Vidwan Mannargudi Vasudevan - Tavil
Vidwan Ananth R Krishnan – Mridanga



**ವಿದ್ವಾನ್ ಅಭಿಷೇಕ್ ರಘುರಾಂ**

ಯುವ ಕಲಾವಿದರಲ್ಲಿ ಮುಂಚೂಣಿಯಲ್ಲಿರುವ ಅಭಿಷೇಕ್ ರಘುರಾಂ ಬೆಳೆದದ್ದೇ ಸಂಗೀತದ ನಡುವೆ. ಅವರ ತಂದೆಯ ತಂದೆ ಖ್ಯಾತ ಮೃದಂಗವಾದಕ ಪಾಲ್ಘಾಟ್ ರಘು ಹಾಗೂ ಅವರ ತಾಯಿಯ ತಂದೆ ಖ್ಯಾತ ಪಿಟೀಲುವಾದಕ ಲಾಲ್‌ಗುಡಿ ಜಯರಾಮನ್. ವಿದ್ವಾನ್ ಪಿ ಎಸ್ ನಾರಾಯಣಸ್ವಾಮಿಯವರಲ್ಲಿ ಅಭಿಷೇಕ್ ಉನ್ನತ ಶಿಕ್ಷಣ ಪಡೆದಿದ್ದಾರೆ. ಆರನೇ ವಯಸ್ಸಿಗೇ ಕಾರ್ಯಕ್ರಮ ನೀಡಲು ಪ್ರಾರಂಭಿಸಿದ ಅಭಿಷೇಕ್ ಈಗಾಗಲೇ ಮೂರು ದಶಕಗಳ ಕಛೇರಿ ಅನುಭವ ಪಡೆದಿದ್ದಾರೆ. ಮೃದಂಗವಾದನದಲ್ಲೂ ಇವರಿಗೆ ವಿಶೇಷ ಪರಿಣತಿ ಇದೆ. ಕರ್ನಾಟಕ ಸಂಗೀತದ ಎಲ್ಲಾ ಹಿರಿಯ ಪಕ್ಕವಾದ್ಯ ಕಲಾವಿದರೊಡನೆ ಹಾಡಿರುವ ಹೆಗ್ಗಳಿಕೆ ಇವರದು. ಹಲವು ಹಿಂದುಸ್ತಾನಿ ಖ್ಯಾತನಾಮರ ಜೊತೆಗೆ ಜುಗಲ್‌ಬಂದಿ ಕಾರ್ಯಕ್ರಮ ನೀಡಿದ್ದಾರೆ. ದೇಶ ವಿದೇಶಗಳ ಪ್ರತಿಷ್ಠಿತ ವೇದಿಕೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಶ್ರೀಯುತರು ಸಂಗೀತ ನಾಟಕ ಅಕಾಡೆಮಿಯ ಉಸ್ತಾದ್ ಬಿಸ್ಮಿಲ್ಲಾಖಾನ್ ಯುವ ಪುರಸ್ಕಾರ, ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಅತ್ಯುತ್ತಮ ಹಿರಿಯ ಗಾಯಕ ಮುಂತಾದ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಸೆಪ್ಟೆಂಬರ್
ಬುಧವಾರ

# 7

September
Wednesday

**ಸಂಜೆ 5.30 ರಿಂದ 6.30 ಕಾವ್ಯವಾಚನ**
**ಕಂಬರಾಮಾಯಣದ ವಧೆ/ವಿದುಷಿ ಭಾಗ್ಯಲಕ್ಷ್ಮಿ/ಶ್ರೀ ಶ್ರೀನಿವಾಸ ಫಣಿ**
**ಸಂಜೆ 6.45ಕ್ಕೆ ಗಾಯನ/6:45 P.M. Vocal**

ವಿದುಷಿ ಭಾರ್ಗವಿ ವೆಂಕಟರಾಂ – ಗಾಯನ
ವಿದ್ವಾನ್ ಎಚ್ ಕೆ ವೆಂಕಟರಾಂ – ವಯೋಲಿನ್
ವಿದ್ವಾನ್ ಕೆ ವಿ ಪ್ರಸಾದ್ – ಮೃದಂಗ
ವಿದ್ವಾನ್ ಜಿ ಎಸ್ ರಾಮಾನುಜನ್ – ಘಟ

Vidushi Bhargavi Venkataram - Vocal
Vidwan H K Venkataram - Violin
Vidwan K V Prasad – Mridanga
Vidwan G S Ramanujan – Ghata



**ವಿದುಷಿ ಕುಮಾರಿ ಭಾರ್ಗವಿ ವೆಂಕಟರಾಂ**

**ವಿದುಷಿ ಕುಮಾರಿ ಭಾರ್ಗವಿ ವೆಂಕಟರಾಂ** ಪ್ರಖ್ಯಾತ ಸಂಗೀತ ಕುಟುಂಬಕ್ಕೆ ಸೇರಿದವರು. ತಾತ ಎಚ್ ವಿ ಕೃಷ್ಣಮೂರ್ತಿ, ತಂದೆ ಎಚ್ ಕೆ ವೆಂಕಟರಾಂ, ತಾಯಿ ತ್ರಿವೇಣಿ ಸರಳಾಯ, ಚಿಕ್ಕಮ್ಮ ಕವಿತಾ ಸರಳಾಯ ಮುಂತಾದ ಕಲಾವಿದರ ಪೋಷಣೆಯಲ್ಲಿ ಭಾರ್ಗವಿ ಇಂದು ಪ್ರಬುದ್ಧ ಗಾಯಕಿಯಾಗಿ ಹೊರಹೊಮ್ಮಿದ್ದಾರೆ. ತಮ್ಮ ಹೆಚ್ಚಿನ ಶಿಕ್ಷಣವನ್ನು ವಿದ್ವಾನ್ ಟಿ ಎಂ ಕೃಷ್ಣ ಅವರಲ್ಲಿ ಮುಂದುವರಿಸುತ್ತಿದ್ದಾರೆ. ದೇಶದ ಪ್ರತಿಷ್ಠಿತ ಸಭೆಗಳಲ್ಲಿ ಕಾರ್ಯಕ್ರಮ ನೀಡಿರುವ ಭಾರ್ಗವಿ ಕನ್ನಡ ಸಂಸ್ಕೃತಿ ಇಲಾಖೆಯ ಕಿಶೋರ ಪ್ರತಿಭೆ, ಅನನ್ಯ ನಾದಜ್ಯೋತಿ ಕಲಾಪುರಸ್ಕಾರ, ರಾಗ ಲಯ ಪ್ರಭಾ ಪುರಸ್ಕಾರ ಮುಂತಾದ ಹಲವು ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ. ಹಲವು ರಾಷ್ಟ್ರೀಯ ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ್ದಾರೆ. ಭರತನಾಟ್ಯದಲ್ಲಿಯೂ ಒಳ್ಳೆಯ ಪರಿಶ್ರಮ ಹೊಂದಿದ್ದಾರೆ.

ಸೆಪ್ಟೆಂಬರ್
ಗುರುವಾರ

# 8

**September**
**Thursday**

**ಸಂಜೆ 5.30 ರಿಂದ 6.30 ಕಾವ್ಯವಾಚನ**
**ಅರ್ಜುನನ ತಪಸ್ಸು/ವಿದುಷಿ ಶ್ಯಾಮಲಾ ಪ್ರಕಾಶ್/**
**ಶ್ರೀಮತಿ ಶೋಭಾ ಆನಂದ್ ಎಲ್**
**ಸಂಜೆ 6.45ಕ್ಕೆ ಗಾಯನ/ 6:45 P.M. -Vocal**

ವಿದುಷಿ ವಾರಿಜಾಶ್ರೀ ವೇಣುಗೋಪಾಲ್ – ಗಾಯನ
ವಿದ್ವಾನ್ ಮತ್ತೂರ್ ಶ್ರೀನಿಧಿ – ವಯೋಲಿನ್
ವಿದ್ವಾನ್ ಎ ರಾಧೇಶ್ – ಮೃದಂಗ
ವಿದ್ವಾನ್ ಶಮಿತ್ ಗೌಡ – ಘಟ

Vidushi Varijashree Venugopal - Vocal
Vidwan Mattur Srinidhi - Violin
Vidwan A Radhesh – Mridanga
Vidwan Shamith Gowda – Ghata



**ವಾರಿಜಾಶ್ರೀ ವೇಣುಗೋಪಾಲ್**

ಬಾಲಪ್ರತಿಭೆಯಾಗಿ ಹೊರಹೊಮ್ಮಿದ ಕರ್ನಾಟಕದ ಹೆಮ್ಮೆಯ ಕುಡಿ ವಾರಿಜಾಶ್ರೀ ಬಹುಮುಖಿ ಪ್ರತಿಭೆಯ ಕಲಾವಿದೆ. ಕರ್ನಾಟಕ ಶೈಲಿಯ ಗಾಯನ ಹಾಗೂ ಕೊಳಲುವಾದನದಲ್ಲಿ ಪರಿಣತಿ ಸಾಧಿಸಿದ್ದಾರೆ. ಸ್ವತಃ ಸಂಗೀತಗಾರರಾದ ವೇಣುಗೋಪಾಲ್ ಹಾಗೂ ರಮಾ ಮಗಳ ಸಂಗೀತ ಪ್ರತಿಭೆಗೆ ನೀರೆರೆದು ಪೋಷಿಸಿದರು. ವಿದುಷಿ ಎಚ್ ಗೀತಾ ಅವರಲ್ಲಿ ಕಲಿತು, ಈಗ ವಿದ್ವಾನ್ ಸೇಲಂ ಪಿ ಸುಂದರೇಶನ್ ಅವರಲ್ಲಿ ಕಲಿಯುತ್ತಿದ್ದಾರೆ. ಬೆಂಗಳೂರಿನ ಪ್ರಖ್ಯಾತ ಮ್ಯೂಸಿಕ್ ಬ್ಯಾಂಡ್ ಚಿತ್ರಾಕ್ಷೊಮಿಕ್ಸ್‌ನ ಭಾಗವಾಗಿ ಖ್ಯಾತ ಕಲಾವಿದರಾದ ಪ್ರವೀಣ್ ಡಿ ರಾವ್, ಪ್ರಮಥ್ ಕಿರಣ್, ಅಜಯ್ ವಾರಿಯರ್ ಅವರ ಜೊತೆಗೂಡಿ ಸಾಂಪ್ರದಾಯಿಕ ಶಾಸ್ತ್ರೀಯ ಸಂಗೀತವನ್ನು ಉಳಿದ ಸಂಗೀತ ಪ್ರಕಾರಗಳೊಂದಿಗೆ ಮೇಳೈಸುತ್ತಿದ್ದಾರೆ. ಅನನ್ಯ ನಾದಜ್ಯೋತಿ ಪುರಸ್ಕಾರ, ಅನನ್ಯ ಪ್ರತಿಭೆ, ಮದರಂಗಿ ಚಿತ್ರದ ಹಿನ್ನೆಲೆ ಗಾಯನಕ್ಕೆ ಅತ್ಯುತ್ತಮ ಮಹಿಳಾ ಗಾಯಕಿ ಪ್ರಶಸ್ತಿ, ಬೆಂಗಳೂರು ನಗರಪಾಲಿಕೆಯ ಕೆಂಪೇಗೌಡ ರಾಜ್ಯ ಪ್ರಶಸ್ತಿ ಮುಂತಾದ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಸೆಪ್ಟೆಂಬರ್
ಶುಕ್ರವಾರ

# 9

September
Friday

**ಸಂಜೆ 5.30 ರಿಂದ 6.30 ಕಾವ್ಯವಾಚನ**
**ಶಬರ ಶಂಕರ ಪಾರ್ಥರ ಯುದ್ಧ/ಕುಮಾರಿ ಮಹಿಮಾ ಕಶ್ಯಪ್/**
**ಶ್ರೀಮತಿ ಶೋಭಾ ಆನಂದ್ ಎಲ್**
ಸಂಜೆ 6.45ಕ್ಕೆ – ವಯೋಲಿನ್ 6:45 P.M. -Violin

ವಿದ್ವಾನ್ ಲಾಲ್‌ಗುಡಿ ಜಿಜೆಆರ್ ಕೃಷ್ಣನ್ – ವಯೋಲಿನ್
ವಿದ್ವಾನ್ ವಿಠ್ಠಲ್ ರಾಮಮೂರ್ತಿ – ವಯೋಲಿನ್
ವಿದ್ವಾನ್ ತಿರುವಾರೂರ್ ಭಕ್ತವತ್ಸಲಂ – ಮೃದಂಗ
ವಿದ್ವಾನ್ ಭಾರ್ಗವ ಹಾಲಂಬಿ – ಖಂಜೀರಾ

Vidwan Lalgudi G J R Krishnan- Violin
Vidwan Vittal Ramamurthy - Violin
Vidwan Thiruvarur Bhaktavatsalam – Mridanga
Vidwan Bhargava Halambi – Khanjeera



**ಲಾಲ್‌ಗುಡಿ ಜಿಜೆಆರ್ ಕೃಷ್ಣನ್ ಮತ್ತು ವಿಠ್ಠಲ್ ರಾಮಮೂರ್ತಿ**

ಸಂತ ತ್ಯಾಗರಾಜರ ಸಂಗೀತ ಪರಂಪರೆಗೆ ಸೇರಿದ, ಸಂಗೀತದ ವಾತಾವರಣದಲ್ಲಿಯೇ ಹುಟ್ಟಿ ಸಂಗೀತವನ್ನೇ ಉಂಡು, ಉಸಿರಾಡಿಕೊಂಡು ಬೆಳೆದ ಕೃಷ್ಣನ್ ಮತ್ತು ವಿಜಯಲಕ್ಷ್ಮಿಗೆ ಸಂಗೀತ ಸಹಜವಾಗಿಯೇ ಮೈಗೂಡಿತ್ತು. ತಾತ ಗೋಪಾಲ ಅಯ್ಯರ್ ಅವರಲ್ಲಿ ಪ್ರಾರಂಭವಾದ ಕಲಿಕೆ ತಂದೆ ಲಾಲ್ಗುಡಿ ಜಯರಾಮನ್ ಅವರಲ್ಲಿ ಮುಂದುವರಿದು ಇವರಿಬ್ಬರು ಇಂದು ಲಾಲ್ಗುಡಿ ಬಾನಿಯ ನೈಜ ಪ್ರತಿನಿಧಿಗಳಾಗಿ ಹೊರಹೊಮ್ಮಿದ್ದಾರೆ. ತನಿವಾದನಕ್ಕಿಂತ ಬೇರೆಯೇ ಆದ ಪ್ರತಿಭೆ ಮತ್ತು ಮನಸ್ಥಿತಿ ದ್ವಂದ್ವ ವಾದನಕ್ಕೆ ಅವಶ್ಯಕ. ಎರಡು ಮನಸ್ಸು ಸಂಗೀತಾತ್ಮಕವಾಗಿ ಪರಸ್ಪರ ಅರ್ಥೈಸಿಕೊಳ್ಳದಿದ್ದರೆ, ಸ್ಪಂದಿಸದಿದ್ದರೆ ದ್ವಂದ್ವವಾದನ ಸಾಧ್ಯವಾಗುವುದಿಲ್ಲ. ಕೃಷ್ಣನ್ ಮತ್ತು ವಿಜಯಲಕ್ಷ್ಮಿ ಪರಸ್ಪರ ಸ್ಪಂದಿಸುತ್ತಾ ನುಡಿಸುವುದರಿಂದ ಅವರ ವಾದನದ ಸ್ವರೂಪವೇ ಬೇರೆ. ಇವರಿಬ್ಬರಿಗೆ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಸಂಗೀತ ಕಲಾನಿಧಿ, ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ, ಇಂದಿರಾ ಶಿವಶೈಲಂ ಎಂಡೋಮೆಂಟ್ ಅವಾರ್ಡ್, ಕಲೈಮಾಮಣಿ, ಸಂಗೀತ ಚೂಡಾಮಣಿ ಮುಂತಾದ ಹಲವಾರು ಪ್ರಶಸ್ತಿ ಪುರಸ್ಕಾರಗಳು ಸಂದಿವೆ.

**ಸೆಪ್ಟೆಂಬರ್**
**ಶನಿವಾರ**

# 10

**September**
**Saturday**

**ಸಂಜೆ 5.30 ರಿಂದ 6.30 ಕಾವ್ಯವಾಚನ**

**ಭೀಷ್ಮ ಸೇನಾಧಿಪತ್ಯ/ವಿದುಷಿ ಶುಭಾ ರಾಘವೇಂದ್ರ/ ಡಾ ಜ್ಯೋತಿ ಶಂಕರ್**

ಸಂಜೆ 6.45ಕ್ಕೆ – ಗಾಯನ /6:45 P.M. -Vocal

ಸಂಜೆ 6.45ಕ್ಕೆ
ವಿದ್ವಾನ್ ಸಿಕ್ಕಿಲ್ ಆರ್ ಗುರುಚರಣ್
ವಿದ್ವಾನ್ ಕಾರ್ತಿಕ್ ನಾಗರಾಜ್ – ವಯೋಲಿನ್
ವಿದ್ವಾನ್ ಉಮಯಾಳಪುರಂ ಕೆ ಶಿವರಾಮನ್ – ಮೃದಂಗ
ವಿದ್ವಾನ್ ಕಾರ್ತಿಕ್ – ಘಟ

Vidwan Sikkil R Gurucharan - Vocal
Vidwan Karthik Nagaraj - Violin
Vidwan Umayalapuram K Sivaraman – Mridanga
Vidwan Karthik – Ghata



**ವಿದ್ವಾನ್ ಸಿಕ್ಕಿಲ್ ಆರ್ ಗುರುಚರಣ್**

ವಿದ್ವಾನ್ ಸಿಕ್ಕಿಲ್ ಆರ್ ಗುರುಚರಣ್ ಕರ್ನಾಟಕ ಸಂಗೀತದ ಯುವಗಾಯಕರಲ್ಲಿ ಅತ್ಯಂತ ಪ್ರತಿಭಾನ್ವಿತರು. ತಮ್ಮ ಭಾವಪೂರ್ಣ ಗಾಯನಕ್ಕೆ ಹೆಸರಾದವರು. ಅಜ್ಜಿ ಖ್ಯಾತ ಕೊಳಲುವಾದಕಿ ಸಿಕ್ಕಿಲ್ ಕುಂಜುಮಣಿ ಬಾಲ್ಯದಲ್ಲೇ ಮೊಮ್ಮಗನ ಪ್ರತಿಭೆಯನ್ನು ಗುರುತಿಸಿ ಅದನ್ನು ಪೋಷಿಸಿ ಬೆಳೆಸಿದರು. ನಂತರ ವಿದ್ವಾನ್ ವೈಗಲ್ ಜ್ಞಾನಸ್ಕಂದನ್ ಮತ್ತು ಬಿ ಕೃಷ್ಣಮೂರ್ತಿಯವರಲ್ಲಿ ತಮ್ಮ ಕಲಿಕೆಯನ್ನು ಮುಂದುವರೆಸಿದರು. ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಂತಹ ಸಂಸ್ಥೆಯಲ್ಲಿ ಇಂದು ಸೀನಿಯರ್ ಸ್ಲಾಟ್‌ನಲ್ಲಿ ಹಾಡುತ್ತಿರುವ ಗುರುಚರಣ್ ವಿಶ್ವದ ಪ್ರತಿಷ್ಠಿತ ವೇದಿಕೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಖ್ಯಾತ ಪಿಯಾನೋವಾದಕ ಅನಿಲ್ ಶ್ರೀನಿವಾಸನ್ ಅವರ ಜೊತೆಗೂಡಿ ಹಲವು ಪ್ರಯೋಗಗಳನ್ನು ಮಾಡಿದ್ದಾರೆ. ಅವರೂ ಸೇರಿ ಧನಂಜಯನ್ಸ್, ಅನಿತ ರತ್ನಂ, ರಾಮ್‌ಲಿ ಇಬ್ರಾಹಿಂ, ಮುರಾದ್ ಆಲಿ ಅವರ ಜೊತೆ ಹಲವು ಹೊಸ ಆಲ್ಬಂಗಳನ್ನು ಹೊರತಂದಿದ್ದಾರೆ. ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ, ಇಸೈ ಪೇರೋಲಿ, ಯಜ್ಞರಾಮನ್ ಎಕ್ಸಲೆನ್ಸ್ ಅವಾರ್ಡ್, ಕಲಾರತ್ನ, ಷಣ್ಮುಖ ಶಿರೋಮಣಿ ಮುಂತಾದ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ.

ಸೆಪ್ಟೆಂಬರ್
ಭಾನುವಾರ
11
September
Sunday

ಸೆಪ್ಟೆಂಬರ್ 02ರಿಂದ ಸೆಪ್ಟೆಂಬರ್ 11ರ ತನಕ ಪ್ರತಿದಿನ ಸಂಜೆ 5:30ರಿಂದ 6:45ರ ವರೆಗೆ ಗಮಕ ಕಾರ್ಯಕ್ರಮವಿರುತ್ತದೆ.

ಬೆಳಗ್ಗೆ 8 ಘಂಟೆಗೆ

**'ಧನ್ವಂತ್ರಿ ಹೋಮ'**

ವೇದ ವಿದ್ವಾಂಸರು ಚಳ್ಳಕೆರೆ ಸಹೋದರರಿಂದ



**'ಪೂರ್ಣಾಹುತಿ'** ಮಧ್ಯಾಹ್ನ 12.30ಕ್ಕೆ

**ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು,**

ಸುತ್ತೂರು ಮಠ, ಮೈಸೂರು ಇವರ ದಿವ್ಯ ಸಾನಿಧ್ಯದಲ್ಲಿ.

**ಸೆಪ್ಟೆಂಬರ್**
**ಭಾನುವಾರ**

# 11

**September**
**Sunday**

**ಸಂಜೆ 5.30 ರಿಂದ 6.30 ಕಾವ್ಯವಾಚನ**
**ಧುರ್ಯೋಧನನ ವಧೆ/ವಿದುಷಿ ಸತ್ಯಲಕ್ಷ್ಮೀ ಅನಂತಪದ್ಮನಾಭ/**
**ಡಾ ಜ್ಯೋತಿ ಶಂಕರ್**
ಸಂಜೆ 6.45ಕ್ಕೆ ಗಾಯನ/6:45 P.M.Vocal

ವಿದ್ವಾನ್ ಸಂದೀಪ್ ನಾರಾಯಣ್ – ಗಾಯನ
ವಿದ್ವಾನ್ ಎಚ್ ಎನ್ ಭಾಸ್ಕರ್ – ವಯೋಲಿನ್
ವಿದ್ವಾನ್ ಉಮಯಾಳಪುರಂ ಕೆ ಶಿವರಾಮನ್ – ಮೃದಂಗ
ವಿದ್ವಾನ್ ಗುರುಪ್ರಸನ್ನ – ಖಂಜರಾ

Vidwan Sandeep Narayan - Vocal
Vidwan H N Bhaskar - Violin
Vidwan Umayalapuram K Sivaraman – Mridanga
Vidwan Guruprasanna – Khanjeera



**ವಿದ್ವಾನ್ ಸಂದೀಪ್ ನಾರಾಯಣ್**

ಶ್ರೀ ಸಂದೀಪ್ ನಾರಾಯಣ್ ಸಂಗೀತದ ಮನೆತನಕ್ಕೆ ಸೇರಿದವರು. ತಾಯಿ ಶ್ರೀಮತಿ ಶುಭಾ ನಾರಾಯಣ್ ಅವರಲ್ಲಿ ಸಂಗೀತ ಶಿಕ್ಷಣ ಪ್ರಾರಂಭಿಸಿ ಅನಂತರ ವಿದ್ವಾನ್ ಶ್ರೀ ಕಲ್ಪಕಂ ಕೃಷ್ಣಮೂರ್ತಿ ಕಲಿತು, ಈಗ ವಿದ್ವಾನ್ ಶ್ರೀ ಸಂಜಯ್ ಸುಬ್ರಮಣ್ಯನ್ ಅವರಲ್ಲಿ ಕಲಿಯುತ್ತಿದ್ದಾರೆ. ಅಮೆರಿಕೆಯನ್ನು ಬಿಟ್ಟು ಚೆನ್ನೈನಲ್ಲಿ ನೆಲೆಸಿ ಸಂಗೀತವನ್ನು ಪೂರ್ಣ ಪ್ರಮಾಣದಲ್ಲಿ ಮುಂದುವರಿಸಿದ್ದಾರೆ. ಶ್ರೀ ಸಂದೀಪ್ ಚೆನ್ನೈನ ಪ್ರತಿಷ್ಠಿತ ಸಭೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಇಂದು ಬಹು ಬೇಡಿಕೆಯಲ್ಲಿರುವ ಯುವ ಕಲಾವಿದರಾಗಿದ್ದಾರೆ. ಅತ್ಯಂತ ಹಿರಿಯ ಕಲಾವಿದರೆಲ್ಲಾ ಇವರಿಗೆ ಪಕ್ಕವಾದ್ಯ ಸಹಕಾರ ನೀಡಿದ್ದಾರೆ. ಸಂಗೀತ ನೃತ್ಯ ಅಕಾಡೆಮಿಯ ಬಿಸ್ಮಿಲ್ಲಾಖಾನ್ ಯುವ ಪುರಸ್ಕಾರ್, ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಬೆಸ್ಟ್ ಕಾನ್ಸರ್ಟ್ ಮತ್ತು ಬೆಸ್ಟ್ ವೋಕಲಿಸ್ಟ್ ಅವಾರ್ಡ್ ಇಸೈ ಪೆರೋಲಿ, ಕಲಾರತ್ನ, ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಎಸ್ ಪಿವಿಜಿಎಂಸಿ
ಟ್ರಸ್ಟ್ (ರಿ)
[illegible]
ವಿ.ವಿ. ಮೊಹಲ್ಲಾ
ಮೈಸೂರು

# Our Thanks to

## Main Donors

1 S.R Kumuda Charitable Trust, Mysore
2 Smt. Vanamala , Mysore
3 Smt. Suruma Bhai & Shanthabai
4 Sri C.S. Rajan, Mysore

## Main Sponsors

- Dr. Ramabai Charitable Foundation, Mysore
- Canara Bank , Mysore
- Sri K.R.Vaidyanathan, Mysore
- Sri Girish Nathan , Chennai
- Geetha Shishu Shikshana Sangha, Mysore
- Koog-u- Foundation Mysore
- Thought Focus Information Technologies
- Smt. Lakshmi Nagaraj
- Smt. Indu Nagaraj

## Our Bank Details :

Trust Name : SPVGMC Trust *
Account # 5052500100501601
Bank Name : Karnataka Bank
IFSC Code : KARB0000505
Branch Name ; V.V.Mohalla, Mysuru

*All donations made to `SPVGMC Trust *
are exempted from 80G of Income Tax Act.*


*Note : PAN CARD/ AADHAR of Donor is mandatory to be mention on the receipt for getting exemption under 80G

## With best compliments from

LIC

Mysore Division

Sabse Pehle Life Insurance







ಕೇವಲ 15 ವರ್ಷ 'ಪ್ರೀಮಿಯಂ ಹಣ' ಪಾವತಿಸಿ

16ನೇ ವರ್ಷದಿಂದ 'ಅಷ್ಟೇ ಹಣ' ವರ್ಷ ವರ್ಷ ಮರು ಪಡೆಯಿರಿ...

ತೆರಿಗೆ ರಹಿತ... ಜೀವನ ಪರ್ಯಂತ


Smt. Gayatri Murali : 9900584708
Sri. Murali : 9845098688
With best compliments from
M N Muralidhar
&
Family
HOLIDAY EXPLORERS
TRAVEL EXPERTS

With best compliments from

SIMHA SILK

SINCE 1972

Traditional and Contemporary, Handwoven Sarees

No. 1, K. R. Circle, Mysore

With best compliments from



Since 1983.

BHAGAVAN
PATHOLOGY
LABORATORY

#1116, 5th Cross, 1503, Srirampet, Vinoba Road, Mysore - 570 001
Phone : 2424488, Telefax : 0821 - 4265488
www.bhagavanpathlab.com
bhagavanpathalab@hotmail.com
info@baghavanpathlab.com

Branch

# 665, 17th main, Kamakshi Hospital road, Saraswathipuram Myaore - 570009
Tel : 0821 4269488, Website : www.bhagavanpathlab.com
E-mail : bhagavanpathalab@hotmail.com | info@baghavanpathlab.com

With best compliments from

www.shaligraphics.com

SHALI GRAPHICS

*Total Printing Solutions.....*



Mr. Srinivas Raju R

1085, Sunnada Keri, 10th Cross, K.R. Mohalla, Mysuru - 570 024

shaligraphics@gmail.com | creative@shaligraphics.com | Info@shaligraphics.com

+ 91 821 - 4260 668 | 98868 25 668 | 98863 25 668

Offset Printing



Digital Printing



Total Binding Solutions



DIGITAL & OFFSET PRINTING

* Brochures
* Leaflets
* Menu Cards
* Product Tags
* Certificates
* Greeting Cards
* ID Card & Tags
* Posters
* Paper Bags
* Invitations
* Files & Folders
* Labels & Stickers
* Company Profiles
* Newsletters
* Calendars
* Magazines
* Business Cards
* Product Boxes

OUR SERVICE SECTORS

* Hospitals
* Labs & Diagnostic Centres
* Hotels & Resorts
* Educational Institutions
* Manufacturing Industries

ALL PRINTING SERVICES UNDER ONE ROOF

ಎಸ್ ಪಿವಿಜಿಎಂಸಿ
ಟ್ರಸ್ಟ್ (ರಿ)
8ನೇ ಕ್ರಾಸ್
ವಿ.ವಿ. ಮೊಹಲ್ಲಾ
ಮೈಸೂರು
website: www.8thcross ganesha.org,
email: spvgmctrust@gmail.com,
cell : 9845501176, 99022 91006

SPVGMC
TRUST

**ಪೋಷಕರು**
ಶ್ರೀಯುತ ವಾಸು
ಮಾಜಿ ಶಾಸಕರು
**ಅಧ್ಯಕ್ಷರು**
ಎಂ ಜಗನ್ನಾಥ ಶೆಣೈ
**ಉಪಾಧ್ಯಕ್ಷರು**
ಎಂ ಲಕ್ಷ್ಮೀನಾರಾಯಣ
**ಕಾರ್ಯದರ್ಶಿ**
ಸಿ.ಆರ್. ಹಿಮಾಂಶು
**ಖಜಾಂಚಿ**
ಗುರುರಾಜ್ ಆರ್
**ಧರ್ಮದರ್ಶಿಗಳು**
ಟಿ.ಎಸ್. ವೇಣುಗೋಪಾಲ್
ಶೈಲಜ
ಅಮರೇಶ್ ದಾಸ್
ಶ್ರೀಧರ್ ಎಂ.ಕೆ.
ವಸಂತ್
ಸಿ. ಚೆಲುವರಾಜು

## ಮನವಿ

**ಸನ್ಮಾನ್ಯರೆ,**

ಮೈಸೂರು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದೇ ಹೆಸರುವಾಸಿಯಾಗಿದೆ. ರಾಜಾಶ್ರಯದಿಂದಾಗಿ ಹಲವಾರು ಕಲೆಗಳು ಇಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಆದರೆ ಇಂದು ಕಲಿಯುಗದಿನಲ್ಲಿ, ಎಲ್ಲಾ ಕಲೆಗಳೂ, ಸಮೂಹ ಮಾಧ್ಯಮಗಳ ಪ್ರಭಾವದಿಂದಾಗಿ ಅವನತಿ ಹೊಂದುತ್ತಿವೆ. ಇಂಥ ಪರ್ವಕಾಲದಲ್ಲಿ, ರಾಜ್ಯಕ್ಕೆ ಅಷ್ಟೇ ಅಲ್ಲ, ಇಡೀ ರಾಷ್ಟ್ರಕ್ಕೆ ಒಂದು ಅಸ್ಮಿತೆಯನ್ನು ನೀಡಿರುವ ಈ ಸಾಂಪ್ರದಾಯಿಕ ಅಭಿಜಾತ ಕಲೆಯ ಮಹಾನ್ ಪರಂಪರೆಯನ್ನು ಜತನವಾಗಿ ಉಳಿಸಿ, ಬೆಳೆಸಿ, ಮುಂದಿನ ಪೀಳಿಗೆಗೆ ತಲುಪಿಸಬೇಕಾದ ಹೊಣೆಗಾರಿಕೆ ನಮ್ಮ ನಿಮ್ಮಂತಹ ಎಲ್ಲಾ ಸಂಗೀತಪ್ರೇಮಿಗಳ ಮೇಲಿದೆ.

ಎಸ್ ಪಿ ವಿ ಜಿ ಎಂ ಸಿ ಟ್ರಸ್ಟ್ 61 ವರ್ಷಗಳಿಂದ ಸಾಂಸ್ಕೃತಿಕ ಪರಿಚಾರದ ಹೊಣೆಗಾರಿಕೆಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಿದೆ. ಅಭಿಜಾತ ಸಂಗೀತವನ್ನು ಜನರತ್ತ ಸಮರ್ಥವಾಗಿ ಒಯ್ಯುವ ಒಂದು ಪ್ರಮುಖ ವೇದಿಕೆಯಾಗಿದೆ. ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತದ ದಿಗ್ಗಜರೆಲ್ಲಾ ಈ ವೇದಿಕೆಯಲ್ಲಿ ಕಾರ್ಯಕ್ರಮ ನೀಡುತ್ತಾ ಬಂದಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕದ ಹಲವಾರು ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಈ ರೀತಿ ಹಲವು ಕಡೆಗಳಿಂದ ದೊರಕಿದ ಸಹಕಾರದಿಂದ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗಿದೆ.

ಅರವತ್ತು ವರ್ಷಗಳ ನಿರಂತರ ಸೇವೆಯ ನಂತರ ಈಗ 61ನೆಯ ವರ್ಷದ ಪಾರಂಪರಿಕ ಸಂಗೀತೋತ್ಸವ 12 ದಿನಗಳ ಕಾಲ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಸಂಗೀತ ಕ್ಷೇತ್ರದ ಹಲವು ಹಿರಿಯ ಕಿರಿಯ ಪ್ರತಿಭಾವಂತ ಕಲಾವಿದರು ಪಾಲ್ಗೊಳ್ಳಲಿದ್ದಾರೆ. ನಿಮ್ಮಂತಹ ದಾನಿಗಳ, ಕಲಾರಸಿಕರ ಔದಾರ್ಯವನ್ನು ನೆಚ್ಚಿಕೊಂಡೇ ನಮ್ಮ ಸಂಸ್ಥೆ ಇಷ್ಟು ವರ್ಷಗಳು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈವರೆಗೆ ತಾವು ನೀಡಿರುವ ಸಹಕಾರವನ್ನು ವಿಶ್ವಾಸಪೂರ್ವಕವಾಗಿ ನೆನೆಯುತ್ತಾ, ಮತ್ತೆ ತಾವೆಲ್ಲರೂ ಆರ್ಥಿಕ ಔದಾರ್ಯ ತೋರಿ ನಮ್ಮ ಸಂಸ್ಥೆಯನ್ನು ಮುಂದಕ್ಕೆ ನಡೆಸಿಕೊಂಡು ಹೋಗಿ, ಈ ನೆಲದ ಅಮೂಲ್ಯ ಕಲಾ ಪರಂಪರೆಯನ್ನು ಕಾಪಾಡುವ ನಿಟ್ಟಿನಲ್ಲಿ ತಮ್ಮ ಸಹಾಯಹಸ್ತ ಚಾಚಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇವೆ.

**ವಿಶ್ವಾಸಪೂರ್ವಕವಾಗಿ,**

**ಧರ್ಮದರ್ಶಿಗಳು**

Headsets, Security Solutions & Telecom platforms

Creative connectivity at its best

www.telekonnectors.com



Telekonnectors

CRAFTING SMART CONNECTIONS